SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE

Online Newspaper Clipping Service

ವಿಜಯ ಕರ್ನಾಟಕ

Dated, Thursday, 15th June– 2017 Pg.No.01

# ವಿವಿಗಳ ಮೇಲೆ ಹಿಡಿತ

## ಕರ್ನಾಟಕ ವಿಶ್ವವಿದ್ಯಾಲಯಗಳ ವಿಧೇಯಕ ವಿಧಾನಸಭೆಯಲ್ಲಿ ಮಂಡನೆ

## ರಾಜ್ಯಪಾಲರ ಪರಮಾಧಿಕಾರಕ್ಕೆ ಕೊಕ್ಕೆ | ಸರಕಾರದ ತೆಕ್ಕೆಗೆ ಉನ್ನತ ಶಿಕ್ಷಣ

**ವಿಕ ಸುದ್ದಿಲೋಕ** ಬೆಂಗಳೂರು

ವಿಶ್ವವಿದ್ಯಾಲಯ ಆಡಳಿತದಲ್ಲಿ ಕುಲಾಧಿಪತಿ ಅವರ (ರಾಜ್ಯಪಾಲರು) ಪರಮಾಧಿಕಾರ ಮೊಟಕುಗೊಳಿಸುವ ಹಾಗೂ ಕುಲಪತಿಗಳನ್ನು ನಿಯಂತ್ರಿಸುವ ಮಹತ್ವದ ಉದ್ದೇಶದ 'ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ವಿಧೇಯಕ-2017' ವಿಧಾನಸಭೆಯಲ್ಲಿ ಬುಧವಾರ ಮಂಡನೆಯಾಗಿದೆ.

ಜ್ಞಾನಾಧಾರಿತ ಕೇಂದ್ರವೆಂಬ ವ್ಯಾಖ್ಯಾನಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿರುವ ವಿವಿಗಳನ್ನು ಶುದ್ಧೀಕರಿಸುವ ಆಶಯವನ್ನೂ ಈ ವಿಧೇಯಕ ಹೊಂದಿದೆ. ಮತ್ತೊಂದೆಡೆ ಇಡೀ ವಿಶ್ವವಿದ್ಯಾಲಯ ವ್ಯವಸ್ಥೆಯನ್ನೇ ಸರಕಾರದ ಹಿಡಿತಕ್ಕೆ ತೆಗೆದುಕೊಳ್ಳುವ ಕಾರ್ಯಸೂಚಿಯೂ ಇದರಲ್ಲಿದೆ. ಉನ್ನತ ಶಿಕ್ಷಣ ಸಚಿವ ಬಸವರಾಜ ರಾಯರೆಡ್ಡಿ ಈ ವಿಧೇಯಕವನ್ನು ಮಂಡಿಸಿದ್ದು, ಚರ್ಚೆಯ ಬಳಿಕ ಅಂಗೀಕಾರವಾಗಬೇಕಿದೆ.

ರಾಜ್ಯದಲ್ಲಿ ಸದ್ಯಕ್ಕೆ 7 ವಿವಿಗಳ ಅಧಿನಿಯಮ ಜಾರಿಯಲ್ಲಿದೆ. ಈ ಎಲ್ಲವನ್ನೂ ಏಕತ್ರಗೊಳಿಸಿ ಒಂದೇ ಸೂರಿನಡಿ ತರಬೇಕು ಎನ್ನುವುದು ಹೊಸ ವಿಧೇಯಕದ ಪ್ರಮುಖಾಂಶಗಳಲ್ಲೊಂದು. ಇದರ ಅನುಸಾರ ಪರೀಕ್ಷೆಗೆ ಸಂಬಂಧಿಸಿ ಏಕರೂಪ ವೇಳಾಪಟ್ಟಿ ವಿಧಾನ ಕಟ್ಟುನಿಟ್ಟಾಗಿ ಬರಲಿದೆ. ಪ್ರವೇಶ ಪ್ರಕ್ರಿಯೆಗೂ ಇದು ಅನ್ವಯವಾಗಲಿದೆ.

ಇದರಿಂದ ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಾಗುವ ವಿಶ್ವಾಸ ಹೊಂದಲಾಗಿದೆ. ಇದರ ಹೊರತಾಗಿ ಸಂಶೋಧನೆ ಹಾಗೂ ಇನ್ನಿತರ ಶೈಕ್ಷಣಿಕ ಚಟುವಟಿಕೆಯಲ್ಲಿ ವಿವಿಗಳ ಸ್ವಾಯತ್ತೆಗೆ ಧಕ್ಕೆಯಾಗುವುದಿಲ್ಲ. ವಿವಿಗಳ ಆಡಳಿತ ಮತ್ತು ಹಣಕಾಸು ವ್ಯವಸ್ಥೆಗೂ ತೊಂದರೆಯಾಗುವುದಿಲ್ಲವೆಂದು ಈ ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

**ಕುಲಾಧಿಪತಿ ಚಟಿಗಸಲಿ:** ಕುಲಾಧಿಪತಿಯಾದ ರಾಜ್ಯಪಾಲರು ರಾಜ್ಯದ ಎಲ್ಲ ವಿವಿಗಳಿಗೂ ಮುಖ್ಯಸ್ಥರು. ವಿವಿಗಳ ಪ್ರಮುಖ ನೀತಿ ನಿರೂಪಣೆಯಲ್ಲಿ ಅವರಿಗೆ ವಿಶೇಷ ಅಧಿಕಾರವಿರುತ್ತದೆ. ಉದ್ದೇಶಿತ ವಿಧೇಯಕವು ಈ ಪರಮಾಧಿಕಾರವನ್ನು ಕಸಿದುಕೊಳ್ಳುವ ಎಲ್ಲ ಸಾಧ್ಯತೆಯೂ ಇದೆ. "ಸಮಾನವಾದ, ಶೀಘ್ರವಾದ ಮತ್ತು ಪರಿಣಾಮಕಾರಿ ನಿರ್ಧಾರ ಕೈಗೊಳ್ಳುವಾಗ ಕುಲಾಧಿಪತಿಯು ರಾಜ್ಯ ಸರಕಾರದೊಡನೆ ಸಮಾಲೋಚಿಸಿ ಎಲ್ಲ ಅಧಿಕಾರವನ್ನು ಚಲಾಯಿಸತಕ್ಕದ್ದು," ಎಂದು ಇದರಲ್ಲಿ ಸೇರಿಸಲಾಗಿದೆ.

ಜತೆಗೆ ಕುಲಪತಿ ಆಯ್ಕೆಯ ಶೋಧನಾ ಸಮಿತಿಗೆ ಯಾವ ಹಿನ್ನೆಲೆಯ ಸದಸ್ಯರು ಇರಬೇಕು ಎನ್ನುವುದನ್ನೂ ಸ್ಪಷ್ಟಪಡಿಸಲಾಗಿದೆ. ಕುಲಪತಿ ನೇಮಕಕ್ಕೆ ವಿದ್ಯಾರ್ಹತೆ ನಿಗದಿಪಡಿಸುವುದಾಗಿಯೂ ತಿಳಿಸಲಾಗಿದೆ. ವಿದ್ಯಾವಿಷಯಕ ಪರಿಷತ್ತಿನ ಸದಸ್ಯರಿಗೂ ವಿದ್ಯಾರ್ಹತೆ ಕಡ್ಡಾಯವಾಗಲಿದೆ. ಕ್ಲಸ್ಟರ್ ವಿವಿಗಳ ಕ್ರಮಬದ್ಧ ನಿರ್ವಹಣೆಯತ್ತಲೂ ನಿಗಾ ವಹಿಸಲಾತ್ತದೆ. ಅಂತರ್ ವಿವಿ ವರ್ಗಾವಣೆಗೂ ಅವಕಾಶ ಕಲ್ಪಿಸಲಾಗುತ್ತಿದೆ.

### ನೇಮಕಕ್ಕೆ ಪ್ರತ್ಯೇಕ ಮಂಡಳಿ

ರಾಜ್ಯದ ಎಲ್ಲ ವಿವಿಗಳ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೇಮಕಕ್ಕೆ ಸರಕಾರದ ಮಟ್ಟದಲ್ಲಿ ಪ್ರತ್ಯೇಕ ಮಂಡಳಿ ರಚಿಸಲಾಗುತ್ತದೆ. ಉನ್ನತ ಶಿಕ್ಷಣ ಇಲಾಖೆ ಅಧೀನದಲ್ಲಿ ಈ ಮಂಡಳಿ ಕಾರ್ಯ ನಿರ್ವಹಿಸಲಿದೆ. ವಿವಿಗಳಲ್ಲಿ ಆಂತರಿಕವಾಗಿ ನಡೆಯುವ ನೇಮಕ ಪ್ರಕ್ರಿಯೆ ಮತ್ತು ಹಗರಣಕ್ಕೆ ಕಡಿವಾಣ ಹಾಕಲು ಇದು ನೆರವಿಗೆ ಬರಬಹುದು ಎನ್ನುವುದು ಸರಕಾರದ ಆಲೋಚನೆಯಾಗಿದೆ.




### ಮೂಲಸೌಕರ್ಯಕ್ಕೂ ಮಂಡಳಿ

ವಿವಿಗಳ ಮೂಲಸೌಕರ್ಯ ಅಭಿವೃದ್ಧಿ ಸಂಬಂಧವೂ ಮಂಡಳಿಯೊಂದನ್ನು ರಚಿಸಲಾಗುತ್ತದೆ. ಈ ಮಂಡಳಿಗೆ ಉನ್ನತ ಶಿಕ್ಷಣ ಸಚಿವರು ಅಧ್ಯಕ್ಷರಾಗಿರುತ್ತಾರೆ. ಅದರಂತೆ 1 ಕೋಟಿ ರೂ. ಮೀರಿದ ಕಾಮಗಾರಿಗಳ ನಿರ್ಧಾರವನ್ನು ಮಂಡಳಿ ತೆಗೆದುಕೊಳ್ಳಲಿದೆ. ಅಕ್ರಮ ತಪ್ಪಿಸುವ ಉದ್ದೇಶದಿಂದಲೇ ಈ ಕ್ರಮವೆಂದೂ ವಿಧೇಯಕದಲ್ಲಿ ಉಲ್ಲೇಖಿಸಲಾಗಿದೆ.

ಉದಯವಾಣಿ



# ಖಾಸಗಿ ಕಾಲೇಜು ವೈದ್ಯ ವಿದ್ಯಾರ್ಥಿಗಳಿಗೆ ಮಣಿದ ಸರ್ಕಾರ

**ವಿಧಾನಸಭೆ:** ಖಾಸಗಿ ಕಾಲೇಜುಗಳಿಗೆ ಲಕ್ಷಾಂತರ ರೂ. ಡೊನೇಷನ್ ನೀಡಿ ವೈದ್ಯಕೀಯ ಸೀಟು ಗಿಟ್ಟಿಸುವ ವಿದ್ಯಾರ್ಥಿಗಳಿಗೆ ಗ್ರಾಮೀಣ ಕಡ್ಡಾಯ ಸೇವೆಯಿಂದ ರಿಯಾಯಿತಿ ನೀಡಿ, ಕೇವಲ ಸರ್ಕಾರಿ ಕೋಟಾದಡಿ ಮೆಡಿಕಲ್ ಸೀಟು ಪಡೆದವರಿಗೆ ಮಾತ್ರ ಈ ಸೇವೆ ಕಡ್ಡಾಯಗೊಳಿಸುವ ವಿಧೇಯಕವನ್ನು ಮಂಡಿಸಲಾಗಿದೆ.

ಈ ಕುರಿತಂತೆ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಅವರು, ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ (ತಿದ್ದುಪಡಿ) ವಿಧೇಯಕ-2017ನ್ನು ವಿಧಾನಸಭೆಯಲ್ಲಿ ಬುಧವಾರ ಮಂಡಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ವೈದ್ಯರ ಕೊರತೆ ನೀಗಿಸಲು ಕರ್ನಾಟಕದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಕಡ್ಡಾಯವಾಗಿ ಒಂದು ವರ್ಷ ಗ್ರಾಮೀಣ ಸೇವೆ ಮಾಡಬೇಕು ಎಂದು ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ 2012ರಲ್ಲಿ ಕರ್ನಾಟಕ ವೈದ್ಯಕೀಯ ಕೋರ್ಸುಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ ತರಬೇತಿ ಅಧಿನಿಯಮ ಪ್ರಸ್ತಾಪಿಸಿತ್ತು. ನಂತರ ಇದನ್ನು ಮತ್ತಷ್ಟು ಬಿಗಿಗೊಳಿಸಿ ಕಾಂಗ್ರೆಸ್ ಸರಕಾರ ತಿದ್ದುಪಡಿ ವಿಧೇಯಕ ಮಂಡಿಸಿ ಒಪ್ಪಿಗೆ ಪಡೆದುಕೊಂಡಿತ್ತು.

**ಸರ್ಕಾರಿ ಕೋಟಾದಡಿ ಮೆಡಿಕಲ್ ಸೀಟು ಪಡೆದವರಿಗೆ ಮಾತ್ರ ಗ್ರಾಮೀಣ ಸೇವೆ ಕಡ್ಡಾಯ**

**ತಡೆಯಾಜ್ಞೆ ತೆರವು ವಿಫಲವಾಯ್ತು:** ಆದರೆ, ಇದನ್ನು ಪ್ರಶ್ನಿಸಿ ಖಾಸಗಿ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆದ ಅಭ್ಯರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಹೀಗಾಗಿ ಸರ್ಕಾರದ ಅಧಿನಿಯಮಕ್ಕೆ ಹೈಕೋರ್ಟ್ ತಡೆಯಾಜ್ಞೆ ನೀಡಿತ್ತು. ತಡೆಯಾಜ್ಞೆ ತೆರವುಗೊಳಿಸಲು ಸಾಕಷ್ಟು ಪ್ರಯತ್ನ ಮಾಡಲಾಯಿತಾದರೂ ಅದು ಫಲ ನೀಡಲಿಲ್ಲ. ಹೀಗಾಗಿ ವಿಧೇಯಕದಲ್ಲಿ ಎರಡು ಪ್ರಮುಖ ಬದಲಾವಣೆ ತರಲು ನಿರ್ಧರಿಸಿದ ಸರ್ಕಾರ ತಿದ್ದುಪಡಿ ವಿಧೇಯಕ ಮಂಡಿಸಿದೆ.

ಜತೆಗೆ, ಈ ಹಿಂದಿನ ಆದೇಶದಲ್ಲಿದ್ದ ಒಂದು ವರ್ಷ ಗ್ರಾಮೀಣ ಸೇವೆ ಮಾಡದೇ ಇದ್ದಲ್ಲಿ ಪದವಿ ಪ್ರಮಾಣಪತ್ರ ನೀಡಬಾರದು ಎಂಬ ನಿಯಮವನ್ನು ಕೈಬಿಡಲು ತಿದ್ದುಪಡಿ ವಿಧೇಯಕದಲ್ಲಿ ಪ್ರಸ್ತಾಪಿಸಲಾಗಿದೆ.

### ಆಯ್ಕೆ ದಾಖಲಿಸಲು ಇದೇ 22ರವರೆಗೆ ಅವಕಾಶ

# ಎಂಜಿನಿಯರಿಂಗ್ ಕೋರ್ಸ್ 55 ಸಾವಿರ ಸೀಟುಗಳು ಲಭ್ಯ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಎಂಜಿನಿಯರಿಂಗ್ ಕೋರ್ಸ್‌ಗೆ 2017-18ನೇ ಸಾಲಿನಲ್ಲಿ 55,088 ಸೀಟುಗಳು ಲಭ್ಯ ಇವೆ.

ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೆಬ್‌ಸೈಟ್‌ನಲ್ಲಿ (http://kea.kar.nic.in) ಬುಧವಾರ ರಾತ್ರಿ ಸೀಟು ಮ್ಯಾಟ್ರಿಕ್ಸ್ ಪ್ರಕಟಿಸಿದೆ. ಇದಲ್ಲದೆ, ಕೃಷಿ ವಿಜ್ಞಾನ ಮತ್ತು ಪಶು ವಿಜ್ಞಾನ ಕೋರ್ಸ್‌ಗೆ ಲಭ್ಯವಿರುವ ಸೀಟುಗಳ ಪಟ್ಟಿಯನ್ನೂ ಪ್ರಕಟಿಸಿದೆ.

ಪ್ರತಿ ಕಾಲೇಜಿನಲ್ಲಿ ಲಭ್ಯ ಇರುವ ಕೋರ್ಸ್‌ನ ವಿಭಾಗವಾರು ಸೀಟುಗಳು ಮತ್ತು ಹೈದ್ರಾಬಾದ್- ಕರ್ನಾಟಕ ಪ್ರದೇಶದ ಮೀಸಲಾತಿ ಅನ್ವಯ ಲಭ್ಯ ಇರುವ ಸೀಟುಗಳ ವಿವರ ನೀಡಲಾಗಿದೆ.

'ಸರ್ಕಾರಿ ಮತ್ತು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳಿಂದ ಸರ್ಕಾರಕ್ಕೆ ನೀಡುವ ಶೇ 40ರಷ್ಟು ಸೀಟುಗಳ ಪಟ್ಟಿ ಪ್ರಕಟಿಸಲಾಗಿದೆ. ಕಳೆದ ವರ್ಷವೂ ಇಷ್ಟೇ ಸಂಖ್ಯೆಯ ಸೀಟುಗಳು ಲಭ್ಯ ಇದ್ದವು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದ್ದಾರೆ.

ಶುಲ್ಕ ವಿವರವನ್ನು ಗುರುವಾರ (ಜೂನ್ 15) ಪ್ರಕಟಿಸುವುದಾಗಿ ತಿಳಿಸಲಾಗಿದೆ.

**ಪರಿಷ್ಕೃತ ವೇಳಾಪಟ್ಟಿ:** ಸೀಟು ಲಭ್ಯತಾ ಪಟ್ಟಿ ಪ್ರಕಟಿಸಿದ ನಂತರ ಆಯ್ಕೆ ದಾಖಲಿಸುವ (ಆಪ್ಷನ್ ಎಂಟ್ರಿ) ಪ್ರಕ್ರಿಯೆಗೂ ಚಾಲನೆ ನೀಡಲಾಗಿದೆ. ಇದೇ ಜೂನ್ 22ರ ಸಂಜೆ 6ರವರೆಗೆ ಅವಕಾಶ ಇದೆ.

ಜೂನ್ 23ರಂದು ಅಣಕು ಸೀಟು ಹಂಚಿಕೆ ಮಾಡಲಾಗುತ್ತದೆ. ಬಳಿಕ ಆಪ್ಷನ್ ಎಂಟ್ರಿ ಪರಿಷ್ಕರಣೆ ಮಾಡಲು ಜೂನ್ 23ರ ರಾತ್ರಿ 8ರಿಂದ ಜೂನ್ 24 ಸಂಜೆ 6ರವರೆಗೆ ಅವಕಾಶ ಇದೆ.

ಜೂನ್ 25ರಂದು ಸಂಜೆ 4 ಗಂಟೆಗೆ ಅಂತಿಮವಾಗಿ ಸೀಟು ಹಂಚಿಕೆ ಮಾಡಲಾಗುತ್ತದೆ. ಲಭ್ಯವಾದ ಸೀಟುಗಳನ್ನು ಧೃಡೀಕರಿಸಿ ಶುಲ್ಕ ಪಾವತಿಸಲು ಜೂನ್ 30ರವರೆಗೆ ಸಮಯವಿದೆ ಎಂದು ಪ್ರಕಟಣೆ ತಿಳಿಸಿದೆ.

**ಅಂಕಿ ಅಂಶ**

**55,088**
ಎಂಜಿನಿಯರಿಂಗ್ ಸೀಟುಗಳು

**2,352**
ಬಿಎಸ್ಸಿ (ಕೃಷಿ) ಸೀಟುಗಳು

**231**
ಪಶು ವೈದ್ಯ ವಿಜ್ಞಾನ ಸೀಟುಗಳು

ಕೋಲಾರ ಪ್ರಭ



# ವಿಶ್ವರಕ್ತದಾನ ದಿನಾಚರಣೆಯ ಕಾರ್ಯಕ್ರಮ




ಕೋಲಾರ : ಶ್ರೀ ದೇವರಾಜ ಅರಸ್ ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಯೂಥ್ ರೆಡ್‌ಕ್ರಾಸ್ ಹಾಗೂ ರಾಷ್ಟ್ರೀಯ ಸೇವಾ ಯೋಜನಾ ಘಟಕವು ವಿಶ್ವರಕ್ತದಾನ ದಿನಾಚರಣೆಯ ಪ್ರಯುಕ್ತ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಸಂಸ್ಥೆಯ ಕುಲಪತಿ ಡಾ॥ ಸಿ.ವಿ. ರಘುವೀರ್ ಉದ್ಘಾಟಿಸಿ ಮಾತನಾಡುತ್ತಾ ಈ ದಿನದ ಮಹತ್ವ ಹಾಗೂ ರಕ್ತದಾನದಿಂದಾಗುವ ಉಪಯೋಗಗಳ ಬಗ್ಗೆ ತಿಳಿಸಿಕೊಟ್ಟರು.

ಆಪತ್ಕಾಲದಲ್ಲಿ ಬಂದು ರಕ್ತದಾನ ಮಾಡಿದ ಡಾ॥ ಅಜಯ್‌ಕುಮಾರ್, ಡಾ॥ ಮುರಳಿ ಮೋಹನ್, ಡಾ॥ ಅಸಾದುಲ್ಲಾ, ಡಾ॥ ಆಕಾಶ್, ಶ್ರೀ.ಭಾಸ್ಕರ್, ಶ್ರೀ.ಮುನಿರಾಜು ಮತ್ತು ಹಲವರಿಗೆ ಕಾರ್ಯಕ್ರಮದಲ್ಲಿ ಗೌರವಿಸಲಾಯಿತು. ಇದೇ ಸಂದರ್ಭದಲ್ಲಿ ರಕ್ತದಾನ ಶಿಬಿರವನ್ನು ಆರ್.ಎಲ್. ಜಾಲಪ್ಪ ಆಸ್ಪತ್ರೆಯಲ್ಲಿಆಯೋಜಿಸಲಾಗಿತ್ತು. ದಾನಿಗಳು ಬಹು ಸಂಖ್ಯೆಯಲ್ಲಿ ಬಂದು ಸ್ವಇಚ್ಛೆಯಿಂದ ರಕ್ತದಾನ ಮಾಡಿ ಕಾರ್ಯಕ್ರಮವನ್ನು ಅರ್ಥಪೂರ್ಣಗೊಳಿಸಿದರು.

ಕಾರ್ಯಕ್ರಮದಲ್ಲಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ॥ ಹರೇಂದ್ರಕುಮಾರ.ಎಮ್.ಎಲ್, ಉಪಪ್ರಾಂಶುಪಾಲ ಡಾ॥ ಭಾಸ್ಕರನ್, ಆರ್.ಎಲ್. ಜಾಲಪ್ಪ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ॥ ಮೋಹನ್‌ಕುಮಾರ್.ಕೆ, ಸಂಯೋಜನಾಧಿಕಾರಿ ಡಾ॥ಕುಮಾರಸ್ವಾಮಿನ್.ಎಸ್.ಎಸ್, ಯೂಥ್‌ರೆಡ್‌ಕ್ರಾಸ್‌ನ ಯೋಜನಾದಿಕಾರಿ ಡಾ॥ಸಾಗರ್.ವಿ ಹಾಗೂ ವಿವಿದ ವಿಭಾಗಗಳ ಮುಖ್ಯಸ್ಥರು ಕಾರ್ಯಕ್ರಮದಲ್ಲಿ ಹಾಜರಿದ್ದರು.